ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com

**ದಿನಾಂಕ : 02.10.2016**

**ಪ್ರಕಟಣೆಯ ಕೃಪೆಗಾಗಿ**

# ಕನ್ನಡ ಸಂಸ್ಕೃತಿ ಎಂದರೆ ಕಾವ್ಯ ಸಂಸ್ಕೃತಿ

– ನಾಡೋಜ ಚನ್ನವೀರಕಣವಿ

"ನಾವು ಪರಂಪರೆಯ ಸಾರವನ್ನು ಹೀರಬೇಕು. ಪಂಪ ಹೇಳಿದ ತ್ಯಾಗ, ಭೋಗ, ಅಕ್ಷರ, ಗೇಯ, ಗೋಷ್ಠಿ ಈ ಮೊದಲಾದವುಗಳನ್ನು ಹೊಂದಿರುವ ಮನುಷ್ಯರೇ ನಿಜವಾದ ಮನುಷ್ಯರು. ಅದುವೇ ಕನ್ನಡ ಸಂಸ್ಕೃತಿ. ಒಂದರ್ಥದಲ್ಲಿ ಕನ್ನಡ ಸಂಸ್ಕೃತಿ ಎಂದರೆ ಕಾವ್ಯ ಸಂಸ್ಕೃತಿ" ಎಂದು ನಾಡೋಜ ಚನ್ನವೀರಕಣವಿಯವರು ಅಭಿಪ್ರಾಯಪಟ್ಟರು.

ಶ್ರೀಯುತರು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸದಲ್ಲಿ ಶ್ರೋತೃಗಳೊಂದಿಗೆ ಸಂವಾದ ನಡೆಸಿ ಮಾತನಾಡಿದರು. ಅವರು "ಜೀವನದ ಅನುಭವವನ್ನೇ ಕವಿಗಳು ಭಾಷೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಜೀವನದ ದರ್ಶನವನ್ನು ಯಾವ ಕವಿ ಕೊಡುತ್ತಾನೋ ಅವನೇ ನಿಜವಾದ ಕವಿ. ಸಮಾಜದಲ್ಲಿ ಒಳಿತು ಕೆಡುಕು ಎರಡೂ ಇರುತ್ತದೆ. ನಿಜವಾದ ಕವಿಯಾದವನು  ಯಾವುದು ಸರಿ? ಯಾವುದು ತಪ್ಪು? ಯಾವುದು ವಿವೇಕ? ಯಾವುದು ಅವಿವೇಕ? ಎಂಬ ಜಿಜ್ಞಾಸೆಯನ್ನು ಹುಟ್ಟಿಸಬೇಕು. ಪ್ರಕೃತಿಗೂ ಸುಂದರ ಮತ್ತು ಕ್ರೂರ ಮುಖಗಳೆರಡೂ ಇವೆ. ಹಾಗೆಯೇ ಸಮಾಜದಲ್ಲೂ ಇರುತ್ತದೆ. ಕವಿಯಾದವನು ಅದನ್ನು ಅರಿತು ಕಾವ್ಯದಲ್ಲಿ ಕಟ್ಟಿಕೊಡಬೇಕು. ಯಾರಿಗೂ ಹೆದರಬಾರದು, ಭಯಪಡಬೇಕಾದ ಅಗತ್ಯವಿಲ್ಲ. ಆದರೆ ಕಾವ್ಯ ಯಾರಿಗೂ ನೋವುಂಟುಮಾಡಬಾರದು. ಬಸವಣ್ಣ ಹೇಳುವ ಕಳಬೇಡ, ಕೊಲಬೇಡ, ಅಸಹ್ಯಪಡಬೇಡ ಎಂಬುದು ಕಾವ್ಯಕ್ಕೂ ಅನ್ವಯವಾಗುವ ಮಾತುಗಳೆ. ನಮ್ಮಲ್ಲಿ ಇನ್ನೂ ಹೆಚ್ಚಿನ ಮಟ್ಟದ ಅಧ್ಯಯನ ಸಾಗಬೇಕು. ಕವಿಗಳನ್ನು ಓದಿಕೊಳ್ಳಬೇಕು. ಸಂವಾದ ನಡೆಸಬೇಕು. ಕುವೆಂಪು ಬೇಂದ್ರೆ ಮೊದಲಾದ ಕವಿಗಳೊಡನೆ ನನ್ನ ಒಡನಾಟವಿತ್ತು. ಅಂತಹ ಒಡನಾಟವೂ ಸುಸಂಸ್ಕೃತ ಸಮಾಜದ ನಿರ್ಮಾಣಕ್ಕೆ ಅಗತ್ಯ" ಎಂದು ಹೇಳಿದರು.

ಮೈಸೂರು ದಸರ ಉದ್ಘಾಟನೆಯ ಬಗ್ಗೆ ಮಾತನಾಡುತ್ತಾ "ಮೈಸೂರು ಸಂಪದ್ಭರಿತ ಸಂಸ್ಕೃತಿಯ ನೆಲೆವೀಡು. ಇದು ಅನೇಕರನ್ನು ತನ್ನತ್ತ ಸೆಳೆದಿದೆ. ಕನ್ನಡದ ಕುಶಲತೆಗೆ, ಕನ್ನಡದ ರಸಿಕತೆಗೆ ಕನ್ನಡಿಯು ಮೈಸೂರು – ಎಂದು ಕವಿಗಳೇ ಹಾಡಿ ಹೊಗಳಿದ್ದಾರೆ. ಕಬ್ಬಿಗನನ್ನು, ವೈಣಿಕನನ್ನು ಹೀಗೆ ಅನೇಕರನ್ನು ಮೈಸೂರು ಕೈಬೀಸಿ ಕರೆಯುತ್ತದೆ. ಕುವೆಂಪು ಅವರ ಲಲಿತಾದ್ರಿ ಕವನವನ್ನು ಓದಿಯೇ ಲಲಿತಾದ್ರಿಯನ್ನು ನೋಡಬೇಕೆಂಬ ಹಂಬಲದಿಂದ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಹಂಬಲಿಸಿ ಬಂದಿದ್ದೆ. ಇಂದು ಅದೇ ಚಾಮುಂಡಿ ಬೆಟ್ಟದಲ್ಲಿ ದೇವಿಯ ಸಮ್ಮುಖದಲ್ಲಿ ದಸರಾ ಉದ್ಘಾಟನೆ ಮಾಡಿದ್ದು ನಿಜಕ್ಕೂ ನನಗೆ ಸಂತೋಷವಾಗಿದೆ" ಎಂದು ಹೇಳಿದರು. ತಾವು ಕಾವ್ಯ ಕಟ್ಟಿದ ಸಂದರ್ಭಗಳನ್ನು ಶ್ರೋತೃಗಳೊಂದಿಗೆ ಹಂಚಿಕೊಂಡು 'ಮಾತು' ಮೊದಲಾದ ಕವಿತೆಗಳನ್ನು ವಾಚಿಸಿದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು, ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ ಅವರು,  ಸುವರ್ಣ ಮಹೋತ್ಸವ ಆಚರಣಾ ಸಮಿತಿಯ ಕಾರ್ಯದರ್ಶಿಗಳಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ. ಎಚ್.ಟಿ. ಶೈಲಜ ನಿರೂಪಿಸಿ, ಸ್ವಾಗತಿಸಿದರು. ಶ್ರೀ ವೃಷಭೇಂದ್ರ ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವಂದಿಸಿದರು. ಸಾರ್ವಜನಿಕರು, ವಿದ್ಯಾರ್ಥಿಗಳು, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಗೆ,

ಸಂಪಾದಕರು

ಪ್ರಾಂಶುಪಾಲರು

-----------------------

-----------------------